ಬೇರೇನೂ ಆಗುವುದಿಲ್ಲ, ಅಲ್ಲವೇ?' ಅಂದರು.

ಸಂಜಯ್ ಅಷ್ಟಕ್ಕೇ ಬಿಡಲಿಲ್ಲ. 'ಶಾಸ್ತ್ರಿಗಳೇ, ನಿಮ್ಮ ಮಾತನ್ನೇ ಒಪ್ಪುವ. ನೀವು ಔಷಧ ಕೊಡುವುದು ಕಾಯಿಲೆ ಗುಣ ಮಾಡಲಿಕ್ಕೆ ಎಂದಿಟ್ಟುಕೊಳ್ಳೋಣ. ಈಗ ನೀವು ಸೀತಾಪುರದ ಜನರನ್ನು ಗುಣ ಮಾಡ್ತೀರಿ. ಸರಿಯೇ. ಮುಂದೆ ಇಡೀ ಕರ್ನಾಟಕದ, ಆಮೇಲೆ ಭಾರತದ ಅಥವಾ ಜಗತ್ತಿನ ಜನರನ್ನು ಗುಣ ಮಾಡ್ತೀರಿ. ಅಂದರೆ ಇದಕ್ಕಿಂತ ದೊಡ್ಡ ಸೌಭಾಗ್ಯ ಬೇರೇನಿದೆ ನಿಮಗೆ' ಅಂದ.

ಶಾಸ್ತ್ರಿಗಳು 'ನೀನೂ ಸರಿಯಪ್ಪ, ನಿನ್ನ ಆಲೋಚನೆ ಒಂದರ್ಥದಲ್ಲಿ ಸರಿಯೇ! ಆದರೆ ಒಂದು ರಹಸ್ಯ ಹೇಳ್ತೇನೆ ಕೇಳು. ನನ್ನ ಆಯುರ್ವೇದ ಔಷಧ ಇಲ್ಲಿ ಸೀತಾಪುರದಲ್ಲಿ ಇರುವ ಜನರಿಗೆ ಹಿಡಿಯುತ್ತದೆ. ಅವರು ಈ ವಾತಾವರಣದಲ್ಲೇ ಹುಟ್ಟಿ ಬೆಳೆದಿದ್ದಾರೆ. ದೇವರು ಇಲ್ಲಿ ಬರುವ ಕಾಯಿಲೆಗೆ ಇಲ್ಲಿಯೇ ಔಷಧ ಇಟ್ಟಿರುತ್ತಾರೆ. ನಾನು ಕಾಡು ತೋಟಗಳಲ್ಲಿ ಹೋಗಿ ಆ ಔಷಧ ತಂದು ಜನರಿಗೆ ಕೊಡ್ತೇನೆ. ನನ್ನ ಔಷಧ ಬೇರೆ ಊರಿನವರಿಗೆ ಆಗುತ್ತದೆ ಅಂತ ಯಾವ ಖಾತ್ರಿಯೂ ಇಲ್ಲ. ಯಾವ ಊರಲ್ಲಿ ಅವರಿರುತ್ತಾರೋ ಆ ಊರಿಗೆ ಸರಿಯಾಗಿ, ಅಲ್ಲಿ ಬರುವ ಕಾಯಿಲೆಗೆ ಸರಿಯಾಗಿ, ದೇವರು ಅಲ್ಲಿ ಔಷಧವನ್ನು ಮರಗಿಡಗಳ ರೂಪದಲ್ಲಿ ಇಟ್ಟಿರುತ್ತಾನೆ' ಅಂದರು.

ಸಂಜಯ್ 'ಶಾಸ್ತ್ರಿಗಳೇ, ನೀವು ತಪ್ಪಿಸಿಕೊಳ್ಳಲಿಕ್ಕೆ ಹೀಗೆ ಹೇಳ್ತೀರಿ. ನನಗೆ ಗುಣವಾಗಲಿಲ್ಲವೇ? ಹಾಗೆ ಹೊರಗಿಂದ ಬಂದ ಜನರೂ ಗುಣ ಆಗುವುದಿಲ್ಲವೇ?' ಅಂದ.

ಶಾಸ್ತ್ರಿಗಳು 'ಒಪ್ಪಿದೆ. ಒಂದು ವೇಳೆ ಗುಣ ಆಗ್ತಾರೆ ಅಂದುಕೋ. ಹೊರಗಿನಿಂದ ಬರುವ ನೂರಾರು ಜನರಿಗಾಗಿ ನಾನು ಸೀತಾಪುರದ ಕಾಡು ಮರ ಗಿಡ ಕಡಿಯಬೇಕು ಎಂದಾದರೆ, ಸ್ವಲ್ಪ ವರ್ಷದಲ್ಲಿ ಇಲ್ಲಿ ಎಲ್ಲಾ ಗಿಡ ಮರಗಳು ಖಾಲಿಯಾಗುತ್ತವೆ. ನನಗೆ ಇದರಿಂದ ಸಿಗುವುದಾದರೂ ಏನು? ಇದರ ಬದಲು ಯಾರು ಯಾವ ಊರಲ್ಲಿರುತ್ತಾರೋ ಆ ಊರಲ್ಲಿ ಅಲ್ಲಿರುವ ನನ್ನಂತವರು ಅಲ್ಲಿಯ ಗಿಡ ಮರವನ್ನು ಉಪಯೋಗಿಸಿ ಮದ್ದು ಕೊಟ್ಟರೆ ಒಳ್ಳೆಯದಲ್ಲವೇ? ಇರಲಿ. ನಿನ್ನತ್ರ ಚರ್ಚೆ ಬೇಡ. ಈ ಪ್ರಕೃತಿಗೆ ಯಾವುದು ಸರಿ, ಯಾವುದು ತಪ್ಪು ಅಂತ ಚೆನ್ನಾಗಿ ಗೊತ್ತಿರ್ತದೆ. ಸರಿಯಾದರೆ ಅದು ಸಹಕರಿಸ್ತದೆ... ಇಲ್ಲವಾದರೆ ನಿಲ್ಲಿಸ್ತದೆ. ನಿನ್ನನ್ನು ತಡೆಯಲು ನಾನು ಯಾರು? ನಿನ್ನ ಅಪ್ಪ ಊರು ಬಿಟ್ಟಕೂಡಲೇ ನಾನು ಬೇರೆಯವರನ್ನು ತಡೆಯುವುದನ್ನು ಬಿಟ್ಟೆ. ನನ್ನ ಮಗನನ್ನೂ ತಡೆಯಲಿಲ್ಲ. ನಿನ್ನ ದಾರಿ ನಿನಗೆ, ಆದರೆ ನನ್ನನ್ನು ಮಾತ್ರ ಅದಕ್ಕೆ ಎಳೆಯಬೇಡ. ನನಗೆ ಹಣ ಮಾಡುವ ಆಸೆಯೂ ಇಲ್ಲ, ಹೆಸರಿನ ಹಂಗೂ ಇಲ್ಲ' ಅಂದರು.

ಸಂಜಯ್ 'ಆಯ್ತು ಶಾಸ್ತ್ರಿಗಳೇ... ನಿಮ್ಮಿಚ್ಛೆ' ಅಂದ. ಸೀತಮ್ಮ ಈವರೆಗೂ ಬಾಯಿಬಿಟ್ಟು ಕೇಳಿಕೊಂಡಿದ್ದವರು ಒಮ್ಮೆಗೇ ಈ ಲೋಕಕ್ಕೆ ವಾಪಾಸು ಬಂದು, 'ಬನ್ನಿ, ಊಟ ಮಾಡೋಣ' ಅಂದರು.

ಸಂಜಯ್ 'ನನಗೆ ಹೊಟ್ಟೆ ಇನ್ನೂ ತುಂಬಿಕೊಂಡೇ ಇದೆ, ಊಟ ಬೇಡವಾಗುತ್ತಿದೆ' ಅಂದ. ಸೀತಮ್ಮ, ಆಶಾ ಎಷ್ಟು ಒತ್ತಾಯ ಮಾಡಿದರೂ ಊಟ ಮಾಡದೇ ಮಲಗಲು ಹೊರಟ. ಮಲಗಿ ಇನ್ನೇನು ಕಣ್ಣಿಗೆ ನಿದ್ರೆ ಹತ್ತುತ್ತದೆ ಅನ್ನುವಾಗ ಸೀತಮ್ಮನಿಗೆ ಚಾವಡಿಯಿಂದ ನರಳುವ ಶಬ್ದ ಕೇಳಿತು. ನಿದ್ರೆಯಿಂದೆದ್ದು ಚಾವಡಿಗೆ ಬಂದು ನೋಡಿದರೆ ಅಲ್ಲಿ ಸಂಜಯ್ ಹೊಟ್ಟೆ ಹಿಡಿದುಕೊಂಡು ಒದ್ದಾಡುತ್ತಿದ್ದ. 'ಏನೋ ಮಗ, ಏನಾಯ್ತು' ಅಂತ ವಿಚಾರಿಸಿದರೆ ಸಂಜಯ್ ಹೊಟ್ಟೆಹಿಡಕೊಂಡು ಬಹಳ ನೋವಾಗುತ್ತಿರುವುದಾಗಿ ಹೇಳಿದ. ಕೂಡಲೇ ಸೀತಮ್ಮ ಒಳಗೆ ಹೋಗಿ ಶಾಸ್ತ್ರಿಗಳನ್ನು ಎಬ್ಬಿಸಿದರು. ಶಾಸ್ತ್ರಿಗಳು ಅರ್ಧ ನಿದ್ರೆಯಲ್ಲೇ ಹೊರಗೆ ಬಂದು ಸಂಜಯನನ್ನು ನೋಡಿ 'ಈ ಕಡೆ ಕೈಕೊಡು' ಅಂದರು. ಸಂಜಯನ ನಾಡಿ ಹಿಡಿದು ಏನೋ ಪರಿಶೀಲಿಸಿದರು. ಹಾಗೆಯೇ ಅವನ ಬಾಯಿಯನ್ನೂ ಕಣ್ಣನ್ನೂ ಬಿಡಿಸಿ ನೋಡಿದ್ದಾಯಿತು. ನಂತರ ಅಲ್ಲೇ ಇದ್ದ ಯಾವುದೋ ಎರಡು ಕರಡಿಗೆಯಿಂದ ಒಂದೊಂದು ಚಿಟಿಕೆ ಔಷಧವನ್ನು ತನ್ನ ಎಡಕೈಗೆ ಹಾಕಿ ಬಲದ ಹೆಬ್ಬೆರಳಿನಿಂದ ಆ ಮದ್ದನ್ನು ಸರಿಯಾಗಿ ತಿಕ್ಕಿ ಬೆರೆಸಿದರು.

'ಎಲ್ಲಿ ಬಾಯಿ ಬಿಡು' ಅಂದರು ಸಂಜಯನಿಗೆ. ಸಂಜಯ್ ಬಾಯಿ ಬಿಟ್ಟ. ಶಾಸ್ತ್ರಿಗಳು ಎಡ ಕೈಯಲ್ಲಿದ್ದ ಪುಡಿಯನ್ನು ಬಲಕೈಗೆ ತೆಗೆದುಕೊಂಡು ಅವನ ಬಾಯಿಯೊಳಗೆ ಹಾಕಿದರು. ನಂತರ ಕೈ ಒರೆಸಿ, 'ನಿನ್ನ ಹೊಟ್ಟೆ ಹಾಳಾಗಿದೆ. ಗಾಬರಿ ಯಾಗುವಂತದ್ದು ಏನೂ ಇಲ್ಲ. ನಿನಗೆ ನಾಲ್ಕಾರು ಸಲ ಬೇಧಿಯಾಗುತ್ತದೆ. ಹೆದರಬೇಡ. ಸ್ವಲ್ಪ ಸ್ವಲ್ಪ ನೀರು ಕುಡಿದು ದೇಹದಲ್ಲಿ ನೀರಿನಂಶ ಇರುವ ಹಾಗೆ ನೋಡಿಕೋ. ಒಮ್ಮೆಗೇ ಜಾಸ್ತಿ ನೀರು ಕುಡಿದು ವಾಂತಿಯಾಗುವ ಹಾಗೆ ಮಾಡಿಕೊಳ್ಳಬೇಡ. ಕೆಲವು ಸಲ ಬೇಧಿಯಾದ ಮೇಲೆ ಹೊಟ್ಟೆನೋವು ಕಡಿಮೆಯಾಗುತ್ತದೆ. ನಾನು ಮಲಗಲು ಹೋಗ್ತೇನೆ. ಏನಾದ್ರೂ ಜೋರಾದರೆ ಮತ್ತೆ ಕರಿ. ನೀನು ಯುವಕ, ನಾಲ್ಕು ಸಲ ಬೇಧಿಯಾದರೆ ಏನೂ ತೊಂದರೆ ಇಲ್ಲ' ಅನ್ನುತ್ತಾ ಹೆಗಲಲ್ಲಿದ್ದ ಶಾಲನ್ನು ಮೇಲೆ ಎಳೆಯುತ್ತಾ ಒಳಗೆ ಹೋದರು.

ಸೀತಮ್ಮ ಸಂಜಯನನ್ನು ನೋಡಿ 'ಹೆದರಬೇಡ, ಶಾಸ್ತ್ರಿಗಳ ಔಷಧ ತಗೊಂಡಮೇಲೆ ಗುಣ ಆಯ್ತು ಅಂದುಕೋ. ನಾನೂ ಮಲಗಲು ಹೋಗ್ತೇನೆ. ಬೇಕಾದರೆ ಕರಿ' ಅನ್ನುತ್ತಾ ಒಳಗೆ ಹೋದರು.

ಸಂಜಯನಲ್ಲಿ ಒಂದು ಕ್ಷಣ ತಬ್ಬಲಿಯಾದ ಭಾವನೆ ಬಂತು. ನಂತರ ಧೈರ್ಯ ತಂದುಕೊಂಡು ಮಲಗಲು ಪ್ರಯತ್ನಿಸಿದ. ಇದಾಗಿ ಸುಮಾರು ಹದಿನೈದು ನಿಮಿಷದಲ್ಲಿ ಸಂಜಯನಿಗೆ ಪಾಯಿಖಾನೆಗೆ ಹೋಗಬೇಕಾಗಿ ಬಂತು. ಹಾಗೆ ಹೋಗಲು ಶುರುಮಾಡಿದವನು ಎಂಟು–ಹತ್ತು ಬಾರಿ ಹೋದ. ಹೊಟ್ಟೆನೋವು ಕಡಿಮೆಯಾಯಿತು. ಆದರೆ ಬೇಧಿಯ ಸಮಸ್ಯೆ ಇದಿರಾಯಿತು. ಒಂದೆರಡು ಬಾರಿ ಶಾಸ್ತ್ರಿಗಳನ್ನು ಎಬ್ಬಿಸಿ ಬೇಧಿಯನ್ನು ನಿಲ್ಲಿಸುವ ಔಷಧವನ್ನು ಕೇಳುವ ಆಲೋಚನೆ ಮಾಡಿದ. ಆದರೆ ಶಾಸ್ತ್ರಿಗಳು ಹೇಳಿದ ಮಾತು ನೆನಪಾಯ್ತು. ಹೇಗೂ ಸಂಜಯ್ ರಾತ್ರೆಯನ್ನು ಬೆಳಗು ಮಾಡಿದ.

ಬೆಳಗ್ಗೆ ಕೋಳಿ ಕೂಗುವ ಹೊತ್ತಿಗೆ ಶಾಸ್ತ್ರಿಗಳು ಎದ್ದು ಹೊರಬಂದರು. ಸಂಜಯ್ ಎದ್ದು ಕುಳಿತಿದ್ದ.

'ಬೇಧಿಯಾಯಿತೇನೋ' ಕೇಳಿದರು ಶಾಸ್ತ್ರಿಗಳು.

'ಹೌದು ಶಾಸ್ತ್ರಿಗಳೇ, ಹೊಟ್ಟೆ ನೋವು ನಿಂತಿದೆ, ಆದರೆ ಬೇಧಿ, ಒಂದೆರಡು ಬಾರಿಯಲ್ಲ, ಎಂಟು–ಹತ್ತು ಬಾರಿ ಆಗಿ ಸೋತುಹೋಗಿದ್ದೇನೆ' ಅಂದ. ಶಾಸ್ತ್ರಿಗಳು ಅವನ ನಾಡಿ, ಕಣ್ಣು, ನಾಲಿಗೆ ನೋಡಿದರು. ನಂತರ ಅಲ್ಲೇ ಇದ್ದ ಮದ್ದಿನ ರಾಶಿಯಲ್ಲಿ ಏನೋ ಹುಡುಕಲು ಶುರುಮಾಡಿದರು. ಸಂಜಯನಿಗೆ ಆತಂಕ – ಒಂದು ವೇಳೆ ಶಾಸ್ತ್ರಿಗಳಿಗೆ ಬೇಕಾದ ಮದ್ದು ಸಿಗದಿದ್ರೆ!

ಕೊನೆಗೆ ಶಾಸ್ತ್ರಿಗಳಿಗೆ ಒಂದು ಬೇರಿನ ತುಂಡು ಸಿಕ್ಕಿತು. ಅದು ಸ್ವಲ್ಪ ಹಸಿಯಾಗೇ ಇದ್ದ ಬೇರು. ಅದನ್ನು ಸ್ವಲ್ಪ ಜಜ್ಜಿ ನಂತರ ಸಂಜಯನ ಮೂಗಿನ ಪಕ್ಕ ಹಿಡಿದರು. ನಂತರ ಕೈಯಲ್ಲಿ ಏನೋ ಪುಡಿಯನ್ನು ತಗೆದುಕೊಂಡು ತಿಕ್ಕಿ ತೀಡಿ ಸಂಜಯನ ಬಾಯಿ ಒಳಗೆ ಹಾಕಿದರು. ಸೀತಮ್ಮನನ್ನು ಕರೆದು ಒಂದು ಲೋಟ ಮಜ್ಜಿಗೆ ಕೊಡಲು ಹೇಳಿದರು.

ಏನಾಶ್ಚರ್ಯ, ಸಂಜಯನ ಬೇಧಿ ಅಲ್ಲಿಗೇ ನಿಂತಿತ್ತು. ಸ್ವಲ್ಪ ಹೊತ್ತಿನಲ್ಲಿ ಸಂಜಯನಿಗೆ ಬೆಳಗಿನ ನಿದ್ದೆ ಬಂತು. ಅವನು ಏಳುವಾಗ ಶಾಸ್ತ್ರಿಗಳು ಮುಂಜಾವಿನ ವಾಕಿಂಗ್ ಮುಗಿಸಿ ಹಿಂದೆ ಬಂದಿದ್ದರು. ಹೊಟ್ಟೆಯೆಲ್ಲ ಖಾಲಿಯಾಗಿತ್ತು. ಬೇಧಿ ನಿಂತಿತ್ತು. ಸಂಜಯ್ ಶಾಸ್ತ್ರಿಗಳನ್ನು ನೋಡಿ ಮುಗುಳ್ನಕ್ಕ.

'ಎಲ್ಲಾ ಸರಿಯಾಯ್ತಾ?' ಕೇಳಿದರು ಶಾಸ್ತ್ರಿಗಳು.

'ಹೌದು' ಎನ್ನುತ್ತಾ ತಲೆಯಾಡಿಸಿದ ಸಂಜಯ್. ಹಾಗೆಯೇ ಶಾಸ್ತ್ರಿಗಳಲ್ಲಿ 'ನನಗೆ ಭಾರೀ ಹೊಟ್ಟೆನೋವು ಮತ್ತು ಬೇಧಿ ಆಗಿತ್ತು' ಅಂದ.

'ನಿನ್ನ ಹೊಟ್ಟೆ ಹಾಳಾಗಿತ್ತು. ಅದಕ್ಕೆ ನಿನಗೆ ಬೇಧಿಯ ಮದ್ದು ಕೊಟ್ಟೆ' ಅಂದರು ಶಾಸ್ತ್ರಿಗಳು.

'ಬೇಧಿಯ ಮದ್ದೇ' ಸಂಜಯ್ ಕೇಳಿದ.

'ಹೌದು ಸಂಜಯ್, ಹೊಟ್ಟೆ ಹಾಳಾದಾಗ ಹೊಟ್ಟೆನೋವಿಗೆ ಮದ್ದು ಕೊಟ್ಟು ಅದನ್ನು ನಿಲ್ಲಿಸಬಹುದು. ಆದರೆ ಅದರಿಂದ ಹೊಟ್ಟೆನೋವು ನಿಲ್ಲುತ್ತದೆಯೇ ಹೊರತು ಹೊಟ್ಟೆ ಸರಿಯಾಗುವುದಿಲ್ಲ. ಅದಕ್ಕೆ ನಿನ್ನ ಹೊಟ್ಟೆ ಮೊದಲಿಗೆ ಸ್ವಚ್ಛ ಮಾಡಿದರೆ ಹೊಟ್ಟೆನೋವು ಕಡಿಮೆಯಾಗುತ್ತದೆ, ಮತ್ತೆ ಹೊಟ್ಟೆಯೂ ಸರಿಯಾಗುತ್ತದೆ' ಅಂದರು. ಶಾಸ್ತ್ರಿಗಳು ರೋಗದ ಮೂಲ ಹುಡುಕಿ ಔಷಧ ಕೊಡುತ್ತಿದ್ದರು, ರೋಗದ ಲಕ್ಷಣಕ್ಕಲ್ಲ.

'ಮತ್ತೆ ಆ ಬೇರನ್ನು ಮೂಸುವುದರಿಂದ ನನ್ನ ಬೇಧಿ ಹೇಗೆ ನಿಂತಿತು?' ಎಂದು ಪ್ರಶ್ನಿಸಿದ.

'ಅದೊಂದು ವಿಶೇಷ ಬೇರು' ಅಂದರು ಶಾಸ್ತ್ರಿಗಳು ನಗುತ್ತಾ 'ನಿನಗೆ ಗುಣವಾದರೆ ಸಾಕು, ಅದು ಹೇಗೆ ಗುಣವಾಯ್ತು ಅಂತ ಯಾಕೆ ಬೇಕು?' ನಗುತ್ತಾ ಕೇಳಿದರು.

'ಬೇಗ ಸ್ನಾನ ಮಾಡಿಕೊಂಡು ಬಾ. ಸೀತಾ ಬಹಳ ಚೆನ್ನಾಗಿರುವ ಉದ್ದಿನ ದೋಸೆ ಮಾಡಿದ್ದಾಳೆ. ಆಶಾಳ ಸ್ಪೆಷಲ್ ಚಟ್ನಿ ಇದೆ' ಅಂದರು. ಸಂಜಯ್ ಸ್ನಾನಕ್ಕೆ ಹೋದ.

(ಸಶೇಷ)